**National**
**Kannada**
**27.06.2026 19.35 hrs**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಪ್ರಧಾನಮಂತ್ರಿ ನರೇಂದ್ರ ಮೋದಿ ಮೂರು ದಿನಗಳ ಸೆಶೆಲ್ಸ್ ಪ್ರವಾಸ; ಸೆಶೆಲ್ಸ್ ಅಧ್ಯಕ್ಷರಿಂದ ಆತ್ಮೀಯ ಸ್ವಾಗತ

೨. ದೂರದೃಷ್ಟಿಯೊಂದಿಗೆ ಬೆಂಗಳೂರು ನಗರ ನಿರ್ಮಾಣದಲ್ಲಿ ಕೆಂಪೇಗೌಡರ ಪಾತ್ರ ಅನನ್ಯ - ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್

೩. ಸಹಕಾರಿ ವಲಯದ ಸಂಚಾರ ವೇದಿಕೆ 'ಭಾರತ್ ಟ್ಯಾಕ್ಸಿ' ಇನ್ನೆರಡು ವರ್ಷಗಳಲ್ಲಿ ೫೦೦ ನಗರಗಳಿಗೆ ವಿಸ್ತರಣೆ- ಕೇಂದ್ರ ಸಚಿವ ಅಮಿತ್ ಶಾ

೪. ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಶಿಪ್: ಕ್ವಾರ್ಟರ್‌ಫೈನಲ್ ಪ್ರವೇಶಿಸಿದ ಭಾರತ

**<>><><*><><<>**

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಮೂರು ದಿನಗಳ ಅಧಿಕೃತ ಭೇಟಿಗಾಗಿ ಇಂದು ಸೆಶೆಲ್ಸ್ ತಲುಪಿದ್ದಾರೆ. ಸೆಶೆಲ್ಸ್‌ನ ಅಧ್ಯಕ್ಷ ಡಾ.ಪ್ಯಾಟ್ರಿಕ್ ಹೆರ್ಮಿನಿ ಅವರು ವಿಮಾನ ನಿಲ್ದಾಣದಲ್ಲಿ ನೀಡಿದ ಆತ್ಮೀಯ ಸ್ವಾಗತಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಸಾಮಾಜಿಕ ಜಾಲತಾಣದಲ್ಲಿ ಕೃತಜ್ಞತೆ ವ್ಯಕ್ತಪಡಿಸಿದ್ದಾರೆ. ಸೆಶೆಲ್ಸ್, ಹಿಂದೂ ಮಹಾಸಾಗರ ಪ್ರದೇಶದಲ್ಲಿ ಭಾರತದ ಮಹತ್ವದ ಕಡಲ ಸಹಭಾಗಿತ್ವದ ಹಾಗೂ ಆತ್ಮೀಯ ಮಿತ್ರ ರಾಷ್ಟ್ರವಾಗಿದೆ ಎಂದು ಪ್ರಧಾನಮಂತ್ರಿ ಹೇಳಿದ್ದಾರೆ. ಭಾರತ ಮತ್ತು ಸೆಶೆಲ್ಸ್ ನಡುವಿನ ದೀರ್ಘಕಾಲದ ಸ್ನೇಹ ಬಾಂಧವ್ಯವನ್ನು ಇನ್ನಷ್ಟು ಬಲಪಡಿಸುವುದು ಹಾಗೂ ಉಭಯ ದೇಶಗಳ ಜನರ ಹಿತಾಸಕ್ತಿಗಾಗಿ ಪರಸ್ಪರ ಸಹಕಾರ ವಿಸ್ತರಿಸಲು ಈ ಭೇಟಿ ಮಹತ್ವದ್ದಾಗಿರಲಿದೆ ಎಂದು ಪ್ರಧಾನಮಂತ್ರಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಭಾರತದ ವಿವಿಧ ಭಾಗಗಳ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಅನಿವಾಸಿ ಭಾರತೀಯರು ಸಂರಕ್ಷಿಸಿ, ಆಚರಿಸುತ್ತಿರುವುದು ಶ್ಲಾಘನೀಯ ಎಂದು ಅವರು ಹೇಳಿದ್ದಾರೆ.

**<>><><*><><<>**

ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ ೫೧೬ನೇ ಜಯಂತಿ ಕಾರ್ಯಕ್ರಮಕ್ಕೆ ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಚಾಲನೆ ನೀಡಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ವಿ.ಸೋಮಣ್ಣ ಸೇರಿದಂತೆ ಗಣ್ಯರು ಉಪಸ್ಥಿತರಿದ್ದರು. ಬಳಿಕ ಮಾತನಾಡಿದ ಉಪರಾಷ್ಟ್ರಪತಿ, ಮಹತ್ವದ ದೂರದೃಷ್ಟಿಯೊಂದಿಗಿನ ನಾಡಪ್ರಭು ಕೆಂಪೇಗೌಡರ ಪ್ರಯತ್ನವು ವ್ಯರ್ಥವಾಗಲಿಲ್ಲ. ಅವರು ಅಂದು ನಿರ್ಮಿಸಿದ ಕೆರೆಗಳು ಇಂದು ಕುಡಿಯುವ ನೀರಿನ ಮೂಲಗಳಾಗಿವೆ. ವಿದ್ವಾಂಸರು, ಕುಶಲಕರ್ಮಿಗಳು, ಕಾರ್ಮಿಕರು ಹೀಗೆ ಎಲ್ಲಾ ವರ್ಗದ ಜನರಿಗೂ ಸಮಾನ ಅವಕಾಶಗಳನ್ನು ಕಲ್ಪಿಸಿದ್ದರು ಎಂದು ಹೇಳಿದರು. ಕೆಂಪೇಗೌಡರು ಅನೇಕ ಸಸಿಗಳನ್ನು ನೆಟ್ಟಿದ್ದು, ಇಂದು ೫೦೦ ವರ್ಷಗಳ ನಂತರವೂ ಬೆಂಗಳೂರು ಹಸಿರು ನಗರವಾಗಿದೆ. ಅವರು ದೇವಾಲಯಗಳನ್ನು ನಿರ್ಮಿಸಿ, ಸಮಾಜದ ಜನರಲ್ಲಿ ಸಾಂಸ್ಕೃತಿಕ ಮಹತ್ವವನ್ನೂ ಪೋಷಿಸಿದ್ದರು ಎಂದು ಸಿ.ಪಿ.ರಾಧಾಕೃಷ್ಣನ್ ವಿವರಿಸಿದರು. ಬೆಂಗಳೂರಿನ ನೀರಿನ ಸಮಸ್ಯೆ ನಿವಾರಣೆಯಾಗಬೇಕು, ರೈತ ಯಾವ ರಾಜ್ಯದವರೇ ಆದರೂ ಅವರ ಸ್ಥಾನ ಬದಲಾಗದು. ರೈತರಿಗೆ ಸಮಾನವಾಗಿ ನೀರು ಹಂಚಿಕೆಯಾಗಬೇಕು. ಕರ್ನಾಟಕ - ತಮಿಳುನಾಡು ನಡುವಿನ ಜಲವಿವಾದ ಇತ್ಯರ್ಥವಾಗಬೇಕು. ಜಲವಿವಾದ ಇತ್ಯರ್ಥಕ್ಕೆ ನದಿಜೋಡಣೆ ಉತ್ತಮ ಪರಿಹಾರ ಎಂದು ಉಪರಾಷ್ಟ್ರಪತಿ ಕಿವಿಮಾತು ಹೇಳಿದರು. ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಮಾತನಾಡಿ, ಮುನ್ನೋಟದೊಂದಿಗೆ ಬೃಹತ್ ನಗರವಾಗಿ ಬೆಂಗಳೂರನ್ನು ಕೆಂಪೇಗೌಡರು ರೂಪಿಸಿದರು. ಅವರು ಕೇವಲ ರಸ್ತೆಗಳು ಮತ್ತು ಕಟ್ಟಡಗಳನ್ನು ನಿರ್ಮಿಸಲಿಲ್ಲ, ಜಲಸಂರಕ್ಷಣೆಗೆ ಆದ್ಯತೆ ನೀಡಿದರು. ಸಮಗ್ರ ಸಮಾಜ ನಿರ್ಮಾಣಕ್ಕೆ ಎಲ್ಲಾ ಸಮುದಾಯಗಳಿಗೂ ಸಮಾನ ಆದ್ಯತೆ ನೀಡಿದರು ಎಂದು ಸ್ಮರಿಸಿದರು. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಮಾತನಾಡಿ, ಕೆಂಪೇಗೌಡರ ದೂರದೃಷ್ಟಿಯಿಂದ ಬೆಂಗಳೂರು ನಗರ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿದೆ. ಬೆಂಗಳೂರಿನ ವಿವಿಧ ಭಾಗಗಳಲ್ಲಿ ಕೆಂಪೇಗೌಡರು ಕೆರೆಗಳನ್ನು ನಿರ್ಮಿಸಿದ್ದು, ಅವುಗಳನ್ನು ಉಳಿಸಿಕೊಳ್ಳಬೇಕಾದ ಜವಾಬ್ದಾರಿ ನಮ್ಮದು ಎಂದರು.

<>><><*><><<>

ವಿಶ್ವದ ಯಾವುದೇ ದೇಶದ ಆರ್ಥಿಕತೆಯ ಬಲವು ಅದರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಉದ್ದಿಮೆ - ಎಂಎಸ್‌ಎಂಇ ವಲಯದ ಕೊಡುಗೆಯ ಮೇಲೆ ಅವಲಂಬಿತವಾಗಿದೆ ಎಂದು ಉಪರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದ್ದಾರೆ. ನವದೆಹಲಿದಲ್ಲಿ ಇಂದು ನಡೆದ 'ಎಂಎಸ್‌ಎಂಇ ದಿನ-೨೦೨೫ ಉದ್ಯಮಿ ಭಾರತ' ಕಾರ್ಯಕ್ರಮವನ್ನುದ್ದೇಶಿಸಿ ಮಾತನಾಡಿದ ಅವರು, ಭಾರತದಲ್ಲಿ ಎಂಎಸ್‌ಎಂಇ ವಲಯವು ಮೊದಲ ತಲೆಮಾರಿನ ಉದ್ಯಮಿಗಳ ಸ್ಥೈರ್ಯ ಮತ್ತು ಉದ್ಯಮಶೀಲತೆಯ

ಪ್ರತೀಕವಾಗಿದೆ ಎಂದರು. ದೇಶದ ಒಟ್ಟು ರಫ್ತಿನಲ್ಲಿ ಎಂಎಸ್‌ಎಂಇ ವಲಯ, ಶೇಕಡಾ ೫೦ರಷ್ಟು ಕೊಡುಗೆ ನೀಡುತ್ತಿರುವುದರ ಜೊತೆಗೆ, ಉನ್ನತ ಗುಣಮಟ್ಟದ ಮಾನದಂಡಗಳನ್ನು ನಿರಂತರವಾಗಿ ಕಾಯ್ದುಕೊಂಡಿದೆ ಎಂದು ತಿಳಿಸಿದರು. ೨೦೪೭ರ ವೇಳೆಗೆ ವಿಕಸಿತ ಭಾರತ ನಿರ್ಮಾಣದ ಪಯಣದಲ್ಲಿ ಎಂಎಸ್‌ಎಂಇ ವಲಯವು ಅತ್ಯಂತ ಬಲಿಷ್ಠ ಸ್ತಂಭವಾಗಿ ಹೊರಹೊಮ್ಮಿದೆ ಎಂದು ಹೇಳಿದರು. ದೇಶದ ಎಲ್ಲ ಎಂಎಸ್‌ಎಂಇ ಘಟಕಗಳ ಸಾರ್ವತ್ರಿಕ ನೋಂದಣಿಗೆ ಉತ್ತೇಜನ ನೀಡುವಂತೆ ಎಂಎಸ್‌ಎಂಇ ಸಚಿವಾಲಯಕ್ಕೆ ಸಲಹೆ ನೀಡಿದ ಉಪರಾಷ್ಟ್ರಪತಿ, ಹೆಚ್ಚಿನ ನೋಂದಣಿಯಿಂದ ನಿಖರ ಮಾಹಿತಿಯ ಸಂಗ್ರಹ ಸಾಧ್ಯವಾಗಲಿದ್ದು, ವಲಯದ ನೈಜ ಅಗತ್ಯಗಳಿಗೆ ಅನುಗುಣವಾಗಿ ಪರಿಣಾಮಕಾರಿ ನೀತಿಗಳನ್ನು ರೂಪಿಸಲು ನೆರವಾಗಲಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಮಾತನಾಡಿದ ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಸಚಿವ ಜಿತನ್ ರಾಮ್ ಮಾಂಝಿ, ಪ್ರತಿಯೊಬ್ಬ ಉದ್ಯಮಿಗೂ ಹೊಸತನಕ್ಕೆ ಅವಕಾಶ, ಬೆಳವಣಿಗೆ ಹಾಗೂ ರಾಷ್ಟ್ರ ನಿರ್ಮಾಣದಲ್ಲಿ ಪಾಲ್ಗೊಳ್ಳಲು ಸಮಾನ ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ಬದ್ಧವಾಗಿದೆ ಎಂದು ತಿಳಿಸಿದರು. ಇದೇ ವೇಳೆ, ದೇಶದ ಎಂಎಸ್‌ಎಂಇ ವಲಯವನ್ನು ಮತ್ತಷ್ಟು ಸಬಲಗೊಳಿಸುವ ಪಿಎಂಇಜಿಪಿ ೨.೦ ಪೋರ್ಟಲ್, ಸಮಾಧಾನ್ ೨.೦ ಪೋರ್ಟಲ್ ಸೇರಿದಂತೆ ಹಲವು ಡಿಜಿಟಲ್ ವೇದಿಕೆಗಳು, ಪೋರ್ಟಲ್‌ಗಳಿಗೂ ಉಪರಾಷ್ಟ್ರಪತಿ ಚಾಲನೆ ನೀಡಿದರು.

<>><><*><><<>

ದೇಶದ ಸಹಕಾರಿ ವಲಯದ ಸಂಚಾರಿ ವೇದಿಕೆಯಾದ ಭಾರತ್ ಟ್ಯಾಕ್ಸಿಯನ್ನು ಇನ್ನು ಎರಡು ವರ್ಷಗಳಲ್ಲಿ ದೇಶದ ೫೦೦ ನಗರ - ಪಟ್ಟಣಗಳಿಗೆ ವಿಸ್ತರಿಸಲಾಗುವುದು ಎಂದು ಕೇಂದ್ರ ಗೃಹ ಮತ್ತು ಸಹಕಾರ ಸಚಿವ ಅಮಿತ್ ಶಾ ಹೇಳಿದ್ದಾರೆ. ನವದೆಹಲಿಯಲ್ಲಿಂದು ಭಾರತ್ ಟ್ಯಾಕ್ಸಿ ಅಧಿಕೃತ ಚಾಲನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಈ ಉಪಕ್ರಮವು ಸಹಕಾರಿ ವಲಯದ ಪರಿವರ್ತನಕಾರಿ ಉಪಕ್ರಮವಾಗಿದೆ. ಇದು ನ್ಯಾಯಸಮ್ಮತ ಮತ್ತು ಪಾರದರ್ಶಕ ಸಂಚಾರ ವ್ಯವಸ್ಥೆಯನ್ನು ಒದಗಿಸುವ ಉದ್ದೇಶ ಹೊಂದಿದೆ. ಈ ಮೂಲಕ ಸಾರಥಿ ಎಂದು ಕರೆಯಲ್ಪಡುವ ಚಾಲಕರಿಗೆ ತಮ್ಮ ಗಳಿಕೆಯ ಬಹುಪಾಲು ಸಿಗುವಂತೆ ಖಾತರಿಪಡಿಸಲಾಗುವುದು. ಅದೇ ವೇಳೆ, ಪ್ರಯಾಣಿಕರಿಗೂ ಸುರಕ್ಷಿತ ಮತ್ತು ಕೈಗೆಟಕುವ ಸಾರಿಗೆ ವ್ಯವಸ್ಥೆ ಕಲ್ಪಿಸುವ ಗುರಿ ಹೊಂದಲಾಗಿದೆ ಎಂದು ವಿವರಿಸಿದರು. ಗುಜರಾತ್ ಮೆಟ್ರೋ ರೈಲು ನಿಗಮ, ಅಹಮದಾಬಾದ್ ನಗರ ಪಾಲಿಕೆ, ಗುಜರಾತ್ ರಾಜ್ ಸಹಕಾರಿ ಬ್ಯಾಂಕ್, ಪ್ರಮುಖ ವಿಮಾನ ನಿಲ್ದಾಣಗಳು, ರಐಲ್ವೆ ನಿಲ್ದಾಣಗಳೊಂದಿಗೆ ಭಾರತ್ ಟ್ಯಾಕ್ಸಿ ಒಡಂಬಡಿಕೆಗೆ ಸಹಿ ಹಾಕಿದೆ.

<>><><*><><<>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರ ಆಕಾಶವಾಣಿಯ ಮಾಸಿಕ ಕಾರ್ಯಕ್ರಮ 'ಮನ್ ಕಿ ಬಾತ್' ನಾಳೆ ಬೆಳಗ್ಗೆ ೧೧ ಗಂಟೆಗೆ ಪ್ರಸಾರವಾಗಲಿದೆ. ಇದು ಮನದ ಮಾತು ಕಾರ್ಯಕ್ರಮದ ೧೩೫ನೇ ಆವೃತ್ತಿಯಾಗಿದೆ. ಈ ಕಾರ್ಯಕ್ರಮ ಆಕಾಶವಾಣಿ ಮತ್ತು ದೂರದರ್ಶನದ ಎಲ್ಲಾ ವಾಹಿನಿಗಳು, ಆಕಾಶವಾಣಿ ಸುದ್ದಿ ಜಾಲತಾಣ ಮತ್ತು ನ್ಯೂಸ್ ಆನ್ ಏರ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಪ್ರಸಾರವಾಗಲಿದೆ.  ಪ್ರಧಾನಮಂತ್ರಿ ಕಾರ್ಯಾಲಯ ಹಾಗೂ ವಾರ್ತಾ ಮತ್ತು ಪ್ರಸಾರ ಸಚಿವಾಲಯದ ಯೂಟ್ಯೂಬ್ ವಾಹಿನಿಗಳಲ್ಲಿಯೂ ಪ್ರಸಾರ ಮಾಡಲಾಗುತ್ತದೆ. ಹಿಂದಿ ಭಾಷಣದ ನಂತರ ಪ್ರಾದೇಶಿಕ ಅವತರಣಿಕೆಗಳಲ್ಲಿ ಕಾರ್ಯಕ್ರಮ ಬಿತ್ತರವಾಗಲಿದೆ.

<>><><*><><<>

ಮಾಜಿ ಪ್ರಧಾನಮಂತ್ರಿ ಪಿ.ವಿ.ನರಸಿಂಹರಾವ್ ಅವರ ೧೦೫ನೇ ಜನ್ಮದಿನದ ಅಂಗವಾಗಿ, ಪ್ರಧಾನಮಂತ್ರಿಗಳ ಸಂಗ್ರಹಾಲಯ ಮತ್ತು ಗ್ರಂಥಾಲಯ-ಪಿಎಂಎಂಎಲ್ ನಲ್ಲಿ ಇಂದು ಆಯೋಜಿಸಲಾದ ವಿಶೇಷ ಪ್ರದರ್ಶನಕ್ಕೆ ಪಿಎಂಎಂಎಲ್ ಕಾರ್ಯಕಾರಿ ಮಂಡಳಿಯ ಅಧ್ಯಕ್ಷ ನೃಪೇಂದ್ರ ಮಿಶ್ರ ಚಾಲನೆ ನೀಡಿದರು. ಈ ಪ್ರದರ್ಶನದಲ್ಲಿ ಪಿ.ವಿ.ನರಸಿಂಹರಾವ್ ಅವರ ಜೀವನ ಪಯಣವನ್ನು ಬಿಂಬಿಸುವ ಅಪರೂಪದ ಛಾಯಾಚಿತ್ರಗಳು, ಅಧಿಕೃತ ದಾಖಲೆಗಳು, ಭಾಷಣಗಳು, ಪತ್ರವ್ಯವಹಾರಗಳು ಹಾಗೂ ಐತಿಹಾಸಿಕ ದಾಖಲೆಗಳನ್ನು ಸಾರ್ವಜನಿಕರ ವೀಕ್ಷಣೆಗೆ ಇರಿಸಲಾಗಿದೆ. ಭಾರತ ಇತಿಹಾಸದ ಮಹತ್ವದ ಘಟ್ಟದಲ್ಲಿ ಅವರ ನಾಯಕತ್ವ, ವಿಶೇಷವಾಗಿ ದೇಶದ ಆರ್ಥಿಕ ವ್ಯವಸ್ಥೆಗೆ ಹೊಸ ದಿಕ್ಕು ನೀಡಿದ ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣದಂತಹ ಮಹತ್ವದ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಬಹುಮುಖ ವ್ಯಕ್ತಿತ್ವದ ಅವರ ಪಾತ್ರವನ್ನು ಪ್ರಮುಖವಾಗಿ ಪ್ರದರ್ಶಿಸಲಾಗಿದೆ. ಆಂಧ್ರಪ್ರದೇಶದ ಮುಖ್ಯಮಂತ್ರಿ ಹಾಗೂ ಕೇಂದ್ರ ಸರ್ಕಾರದಲ್ಲಿ ವಿದೇಶಾಂಗ, ಗೃಹ ಮತ್ತು ರಕ್ಷಣಾ ಸಚಿವರು ಸೇರಿದಂತೆ ಹಲವು ಪ್ರಮುಖ ಹುದ್ದೆಗಳನ್ನು ಪಿ.ವಿ.ನರಸಿಂಹರಾವ್ ಅಲಂಕರಿಸಿದ್ದರು. ಅವರು ೧೯೯೧ರ ಜೂನ್ ೨೧ರಿಂದ ೧೯೯೬ರ ಮೇ ೧೬ರವರೆಗೆ ಭಾರತದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ರಾಷ್ಟ್ರಕ್ಕೆ ಸಲ್ಲಿಸಿದ ಅಸಾಧಾರಣ ಸೇವೆ ಗುರುತಿಸಿ, ಅವರಿಗೆ ೨೦೨೪ರಲ್ಲಿ ಮರಣೋತ್ತರವಾಗಿ ಭಾರತ ರತ್ನ ಪ್ರಶಸ್ತಿ ನೀಡಿ ಗೌರವಿಸಲಾಯಿತು.

<>><><*><><<>

ಜಪಾನ್‌ನ ಯಾತ್ಸುಶಿರೊದಲ್ಲಿ ನಡೆಯುತ್ತಿರುವ ಬ್ಯಾಡ್ಮಿಂಟನ್ ಏಷ್ಯಾ ಜೂನಿಯರ್ ಮಿಶ್ರ ತಂಡ ಚಾಂಪಿಯನ್‌ಶಿಪ್‌ನಲ್ಲಿ ಭಾರತ ತಂಡ, ತನ್ನ ಮೊದಲ ಗುಂಪು-ಸಿ ಪಂದ್ಯದಲ್ಲಿ ಕಜಕಿಸ್ತಾನ ವಿರುದ್ಧ ೨-೦ ಅಂತರದ ಗೆಲುವು ದಾಖಲಿಸಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದೆ. ಮಹಿಳೆಯರ ಡಬಲ್ಸ್‌ನಲ್ಲಿ ದುರ್ಗಾ ಈಶಾ ಕಂಡ್ರಾಪು ಮತ್ತು ಕೀರ್ತಿ ಮಂಚಾಲಾ ಜೋಡಿ, ಕಜಕಿಸ್ತಾನದ ಅಲಿಸ್ಸಾ ಕುಲೇಶೋವಾ ಮತ್ತು ದಯಾನಾ ನಾಮೆನೋವಾ ವಿರುದ್ಧ ೧೧-೫ ಅಂತರದಿಂದ ಜಯಗಳಿಸಿ ಭಾರತಕ್ಕೆ ಶುಭಾರಂಭ ನೀಡಿತು. ನಂತರ ನಡೆದ ಮಿಶ್ರ ಡಬಲ್ಸ್ ಪಂದ್ಯದಲ್ಲಿ ಪುನೀತ್ ಸುರೇಶ್ ಮತ್ತು ದೀಪ್ತಿ ರಾಜ್ ಅದಿತಿ ಜೋಡಿ, ಮುಸ್ತಫಾ ಮಲಿಕ್‌ಝೂನ್ ಹಾಗೂ ಅಲಿಸ್ಸಾ ಕುಲೇಶೋವಾ ವಿರುದ್ಧ ೧೧-೧೦ ಅಂತರದ ಗೆಲುವು ಸಾಧಿಸಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>